ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.369/2023

| | | | |
|---|---|---|---|
| ಹೆಸರು | : | ಚರಣ್ | ಸಿ .ಡಬ್ಲ್ಯೂ :4 |
| ತಂದೆ ಹೆಸರು | : | ಲಕ್ಷ್ಮಣ್ | ಪಿ .ಡಬ್ಲ್ಯೂ :1 |
| ವಯಸ್ಸು | : | 25 ವರ್ಷ | |
| ಉದ್ಯೋಗ | : | ಡಿ ದರ್ಜೆ ನೌಕರ ಪಶು ಆಸ್ಪತ್ರೆ , ದೊಡ್ಡಗುಣಿ | |
| ವಾಸಸ್ಥಳ | : | ದೊಡ್ಡಗುಣಿ | |

ಸಾಕ್ಷಿಯನ್ನು ದಿಃ 04-02-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ -2 ಮತ್ತು 5 ಗೊತ್ತಿಲ್ಲ .

ಸಾಕ್ಷಿಗೆ ಸ್ಥಳ ಮಹಜರ್ ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 ಎಂದು ಸಾಕ್ಷಿ ಸಹಿಯನ್ನು ನಿಪಿ -1 (ಎ) ಎಂದು ಗುರುತಿಸಲಾಯಿತು.

ಸುಮಾರು ಎರಡು ವರ್ಷಗಳ ಹಿಂದೆ ಒಂದು ದಿನ ಠಾಣೆಯ ಮುಂಭಾಗ ನಡೆದುಕೊಂಡು ಹೋಗುತ್ತಿದ್ದೆ , ಆ ಸಮಯ ಪೊಲೀಸರು ಕರೆದು ಸಹಿ ಮಾಡಲು ಕೇಳಿದರು , ಅವರ ಕೋರಿಕೆಯ ಮೇರೆಗೆ ನಿಪಿ -1 ಕ್ಕೆ ಸಹಿ ಮಾಡಿದ್ದೇನೆ. ನಿಪಿ-1 ರಲ್ಲಿ ಏನು ಬರೆದಿದೆ ಗೊತ್ತಿಲ್ಲ . ಯಾವ ಕಾರಣಕ್ಕಾಗಿ ಸಹಿ ಪಡೆದಿದ್ದಾರೆ ಎಂದು ಗೊತ್ತಿಲ್ಲ . ನಿಪಿ -1 ರಡಿಯಲ್ಲಿ ಪೊಲೀಸರು ನನ್ನನ್ನು ಯಾವುದೇ ಅಪಘಾತ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ , ನಾನು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲ . ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು)

ಪಾಟೀಸವಾಲುಃ ಸ ಸ ಅ ರವರಿಂದಃ-

ನಿಪಿ -1 ರಲ್ಲಿನ ವಿವರಗಳನ್ನು ಓದಿ ತಿಳಿಸಿ ನಿಪಿ - 1 ರ ಪ್ರಕಾರ ದಿಃ 14-12-2022 ರಂದು ಎನ್ ಹೊಸಹಳ್ಳಿ ಗೇಟ್ ಬಳಿ ಮಧ್ಯಾಹ್ನ 1.00 ಗಂಟೆಯಿಂದ ಪೊಲೀಸರು ಬಂದು ನಿಮ್ಮ ಮತ್ತು ಚಾಸಾ -2 ಮತ್ತು 5 ರವರ ಸಮಕ್ಷಮ ಅಪಘಾತವೊಂದಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರು ಮಾಡಿದ್ದಾರೆ ಅಲ್ಲಿ ಸಹಿ ಮಾಡಿದ್ದೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ಅದನ್ನು ಅಲ್ಲಗಳೆದಿದ್ದಾರೆ . ಪ್ರಕರಣದ ಕುರಿತು ನಾನು ಪೊಲೀಸರ ಮುಂದೆ

ಹೇಳಿಕೆನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗೆಳೆದ ಹೇಳಿಕೆಯನ್ನು ನಿಪಿ -2 ಎಂದು ಗುರುತಿಸಲಾಯಿತು . ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>- ಇಲ್ಲ ಎಂದು ತಿಳಿಸಿದ್ದಾರೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

sd/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.